

1998ರ ಬ್ಯಾಂಕಾಕ್ ಏಷ್ಯನ್ ಗೇಮ್ಸ್‌ನಲ್ಲಿ ಚಿನ್ನದ ಪದಕ ಪಡೆದ ಭಾರತದ ಹಾಕಿ ಆಟಗಾರರು ಅಂದಿನ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಅವರನ್ನು ಭೇಟಿಯಾದ ಕ್ಷಣ.

ಒಂದಾಗಬಲ್ಲದು ಅಷ್ಟೆ. ಹೀಗಾಗಿ ನಮಗೆ ಆ ತಂಡ ಆಘಾತ ನೀಡುವ ಸಾಧ್ಯತೆ ಕಡಿಮೆ. ಈ ಫಾರ್ಮ್ಯಾಟ್‌ನಲ್ಲಿ ಭಾರತಕ್ಕೆ ಅನುಕೂಲವೇ ಇದೆ.

ಭಾರತದ ಹಾಕಿ ತಂಡದ ಈಗಿನ ಸಮಸ್ಯೆ ಏನು? 'ಫಾರ್ವರ್ಡ್ ಲೈನ್' ನನಗೆ ಸ್ವಾರ್ಥಿಗಳ ಪಡೆಯಂತೆ ಕಾಣುತ್ತಿದೆ. ಫಾರ್ವರ್ಡ್ ಆಟಗಾರರು ಅವಕಾಶವಾದಿಗಳ ರೀತಿ ಆಡುತ್ತಾರೆ. ಸಿಗುವ ಅವಕಾಶವನ್ನು ಬಳಸಿಕೊಳ್ಳುವ ಜಾಣ್ಮೆ ಇದ್ದರಷ್ಟೇ ಸಾಲದು; ಅವಕಾಶಗಳನ್ನು ಸೃಷ್ಟಿಸಿಕೊಳ್ಳಬಲ್ಲ ಚಾಕಚಕ್ಯತೆ ಬೇಕು. ಇದಕ್ಕೆ 'ಪ್ಲೇ ಮೇಕರ್ಸ್' ಆಗಬೇಕು. ಅಂಥವರು ಈಗ ಇಲ್ಲ. ಮಿಡ್‌ಫೀಲ್ಡ್‌ನಲ್ಲಿ ಮನ್‌ಪ್ರೀತ್ ತರಹದವರು ಚೆನ್ನಾಗಿ ಆಡುತ್ತಾರೆ ಎನ್ನುವುದು ನಿಜ. ಸುನಿಲ್, ರಮಣ್‌ದೀಪ್ ಅವರಂಥ ಆಟಗಾರರ ಅನುಪಸ್ಥಿತಿ ಕಾಡಲಿದೆ. ಚೆಂಡನ್ನು ಗುರಿಯತ್ತ ತೆಗೆದುಕೊಂಡು ಹೋಗುವ ಕಸುಬುದಾರಿಕೆಯ ಆಟ ಈಗ ಕಾಣುತ್ತಿಲ್ಲ.

ಈಗಿನ ಆಟದಲ್ಲಿ ಯಾವ ಬದಲಾವಣೆ ಆಗಿದೆ? ಈಗ ಬ್ಯಾಸ್ಕೆಟ್‌ಬಾಲ್ ತರಹ ಆಡುತ್ತಾರೆ. ಆಟ ವೇಗವಾಗುತ್ತಿದೆ. ಆರು ನಿಮಿಷ ಚಕಚಕನೆ ಆಡಿ ಬಂದು ಬೆಂಚ್ ಮೇಲೆ ಕುಳಿತು, ಮತ್ತೆ ಹೋಗಿ ಆಡುವಷ್ಟು ಸ್ವಾತಂತ್ರ್ಯ ತೆಗೆದುಕೊಳ್ಳುತ್ತಾರೆ. ನಾನು ಮೈದಾನದಲ್ಲಿ ಆಡುತ್ತಾ ಇದ್ದ ಸಂದರ್ಭದಲ್ಲಿ ಪರಿಸ್ಥಿತಿ ಹೀಗೆ ಇರಲಿಲ್ಲ. ನಾವು ಹೆಚ್ಚು ತಂತ್ರಗಾರಿಕೆಯಿಂದ ಆಡುತ್ತಿದ್ದೆವು. ಕೌಶಲಕ್ಕೆ ಒತ್ತು ನೀಡುತ್ತಿದ್ದೆವು. ಅದರಲ್ಲಿ ಏನಾದರೂ ಏರುಪೇರಾದರೆ ತಲೆ ಕೆಡಿಸಿಕೊಳ್ಳುತ್ತಿದ್ದೆವು. ಈಗ ಆ ರೀತಿಯ ಕೌಶಲಗಳು ನನಗಂತೂ ಕಾಣುತ್ತಿಲ್ಲ.

ಇಂಡಿಯನ್–ಆಸ್ಟ್ರೇಲಿಯನ್ ಶೈಲಿ ಅಳವಡಿಸಿಕೊಂಡ ಕುರಿತು ತಕರಾರು ಕೇಳಿಬಂದಿತ್ತು. ಆ ತಕರಾರು ನಿಮ್ಮದೂ ಹೌದೇ? ಆಸ್ಟ್ರೇಲಿಯಾ ತಂಡ ವೇಗ ಹಾಗೂ ದಾಳಿಕೋರ ಆಟಕ್ಕೆ ಹೆಸರುವಾಸಿ. ಆ ಆಟಗಾರರು ಬಲಿಷ್ಠರು. ಪಂದ್ಯ ಪ್ರಾರಂಭವಾದ ಕ್ಷಣದಿಂದ ಮುನ್ನುಗ್ಗಿಯೇ ಆಡುತ್ತಾರೆ. ಮೇಲಾಗಿ ಆ ತಂಡದ ಆಟಗಾರರು ಯಾವ ಪೊಸಿಷನ್‌ನಲ್ಲಿ ಬೇಕಾದರೂ ಆಡಬಲ್ಲರು. ಅವರ ಶೈಲಿಯನ್ನು ಮಾತ್ರ ಅಳವಡಿಸಿಕೊಂಡು ಭಾರತದವರು ಆಡುವುದು ಸಾಧ್ಯವಿಲ್ಲ. ಯಾಕೆಂದರೆ, ನಮ್ಮ ಆಟಗಾರರು ನಿರ್ದಿಷ್ಟ ಪೊಸಿಷನ್‌ನಲ್ಲಿ ಮಾತ್ರ ಆಡಲು ಸಿದ್ಧ. ಬೇರೆ ಪೊಸಿಷನ್‌ನ ಜವಾಬ್ದಾರಿ ನಿಭಾಯಿಸುವಷ್ಟು ನಿಸ್ಸೀಮರಲ್ಲ. ಆಸ್ಟ್ರೇಲಿಯನ್ನರಂತೆ ಆಲ್‌ರೌಂಡರ್‌ಗಳಾದರೆ ಮಾತ್ರ ಅವರ ತಂತ್ರ ನಮ್ಮಲ್ಲೂ ಫಲಿಸೀತು. ಹೀಗಾಗಿ ಕಾಗದದ ಮೇಲೆ ನಮ್ಮ ತಂಡ ಬಲಾಢ್ಯ ಅಲ್ಲ.

ಕರ್ನಾಟಕದ ಒಬ್ಬರೂ ಆಟಗಾರರು ತಂಡದಲ್ಲಿ ಇಲ್ಲವಲ್ಲ... ಹೌದು... ಸುನಿಲ್ ಗಾಯಗೊಂಡಿದ್ದಾರೆ. ಎಸ್.ಕೆ. ಉತ್ತಪ್ಪ, ನಿತಿನ್ ತಿಮ್ಮಯ್ಯ ಕೂಡ ಗಾಯ, ನೋವಿನ ಸಮಸ್ಯೆಯಿಂದ ಬಳಲಿದವರೇ. ಹೀಗಾಗಿ ಈ ಸಲ ಯಾರೂ ಆಡುತ್ತಿಲ್ಲ.

